Acquisition of land for Burial ground for S. C. People of Sadalga.

588. SRI P. P. HEGRE(Chikodi).—Will the Minister for Law and Municipal Administration be pleased to state :—

(*a*) whether the T.P.C. (Now T.M.C) Sadalga resolved to acquire 2 acres of land out of S.No. 17 of Sadalga for the use of Burial ground for the Scheduled Caste people of Sadalga in 1963;

(*b*) whether it is also not a fact that the (then) T.P.C credited the required amount in the Treasury towards the land value ;

(*c*) whether the Deputy Commissioner, Belgaum personally visited the land to be acquired before passing the award ; if so, when did he visit the land ;

(*d*) whether the Deputy Commissioner has passed the award ; if so, when ;

(*e*) whether the then T.P.C or the present T.M.C. has taken possession of the land acquired and whether the land is being used as burial ground by the Scheduled Castes people of Sadalga ;

(*f*) if not, the reasons for the same ?

SRI D. K. NAIKAR (Minister for Law and Municipal Administration).

(*a*) Yes.

(*b*) No. The then T.P.C. had credited the required amount.

(*c*) Yes on 14th June 1965.

(*d*) The award was passed by the Assistant Commissioner, Chikodi Sub-Division on 28th August 1972 with the approval of the Deputy Commissioner.

(*e*) No. It is however reported that the land is used as burial ground by the People belonging to Scheduled caste.

(*f*) The possession of the land could not be taken over as the Munsiff of Chikodi granted injunction in Civil Suit No. 17/1973. The suit has since been dismissed on 13th February 1976. Further action will now be taken in the matter.

ಶ್ರೀ ಪಿ ಪಿ. ಹೆಗರೆ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸದಲಗ ಜಮೀನನ್ನು ಅಕ್ವಯರ್ ಮಾಡಲು 1963ರಲ್ಲಿ ಪಂಚಾಯತಿಯವರು ನಿರ್ಣಯ ಕೈಗೊಂಡರು ಎಂದು ಹೇಳಿದ್ದಾರೆ. ಅದೇ ರೀತಿ ಅಸಿಸ್ಟೆಂಟ್ ಕಮಿಷನರ್ ಅವರು ಅವಾರ್ಡ್ ಮಾಡಿದ ನಂತರ ಡೆಪ್ಯೂಟಿ ಕಮಿಷನರ್ ಅವರು 1972ರಲ್ಲಿ ಅಪ್ರೂವ್ ಮಾಡಿದ್ದಾರೆ, ಎಂದು ಉತ್ತರ ಕೊಟ್ಟಿದ್ದಾರೆ ಮತ್ತು ಈವರೆಗೂ ಕಬ್ಜ ಕೊಟ್ಟಿಲ್ಲ ಎಂದು ಕೂಡ ಹೇಳಿದ್ದಾರೆ. ಇದುವರೆಗೂ ಕಬ್ಜ ಪಡೆಯಲಿಲ್ಲದ್ದಕ್ಕೆ ಕಾರಣ ಏನು ?

† ಶ್ರೀ ಡಿ. ಕೆ. ನಾಯ್ಕರ್.—1973ರಲ್ಲಿ ಕಬ್ಜ ಕೊಟ್ಟು, ಆಗ ಇದರ ಬಗೆ ಸಿವಿಲ್ ಸೂಟ್ ಫೈಲ್ ಆದ್ದರಿಂದ ಕೋರ್ಟ್‌ನವರು ಇಂಜಂಕ್ಷನ್ ಕೊಟ್ಟರು. 13—2—76ರಲ್ಲಿ, ಅಂದರೆ ಮೊನ್ನೆ ಇದು ಡಿಸ್‌ಮಿಸ್ ಆಗಿದೆ. ಈಗ ಜಾಗವನ್ನು ಪೊಜಿಷನ್‌ಗೆ ತೆಗೆದುಕೊಳ್ಳುವಂಥ ಕ್ರಮ ಏರ್ಪಾಡು ಆಗಿದೆ.

ಶ್ರೀ ಪಿ. ಪಿ. ಹೆಗಡೆ.—ಇದರ ಬಗ್ಗೆ ಪಂಚಾಯತಿಯವರು 1963ರಲ್ಲಿ ತೀರ್ಮಾನವನ್ನು ತೆಗೆದುಕೊಂಡು ಇದು 1972ರವರೆಗೆ ವಿಳಂಬ ಆಗಿದೆ. ಇದಕ್ಕೆ ಪಂಚಾಯತಿಯವರೆ ಕಾರಣವೇ? ಯಾವ ಒಂದು ಅಭಿಪ್ರಾಯವನ್ನು, ಅಸಿಸ್ಟೆಂಟ್ ಕಮಿಷನರ್ ಆಗಲೀ, ಡೆಪ್ಯೂಟಿ ಕಮಿಷನರ್ ಆಗಲೀ ಇದರ ಬಗ್ಗೆ ಕೊಟ್ಟಿಲ್ಲ. ಹೀಗಿರುವಾಗ ಇದು ವಿಳಂಬ ಆಗಿದೆ. ಮುಂದೆ ಇದರ ಬಗ್ಗೆ ಆರ್ಡರ್ ಆದ ಬಳಿಕ ಇದನ್ನು ಪೊಜಿಷನ್‌ಗೆ ತೆಗೆದುಕೊಳ್ಳುವುದನ್ನು ತಪ್ಪಿಸುವ ಸಲುವಾಗಿ ಅಲ್ಲಿಯ ಛೇರ್ಮನ್ನರು ಊರನ್ನು ಬಿಟ್ಟು ಹೋದರು, ಇಲ್ಲಿ ಹರಿಜನರು ನೂರಾರು ವರ್ಷಗಳಿಂದ, ಇದು ಸ್ಮಶಾನಕ್ಕೆ ಸೇರಿದ ಜಮೀನು ಎಂದು ಗೊತ್ತಿದ್ದೂ ಕೂಡ ಉಪಯೋಗ ಮಾಡುತ್ತಿದ್ದಾರೆ. ಇದರ ರೆಕಾರ್ಡ್ ಇಲ್ಲದೆ ಇದ್ದ ಕಾರಣ ಅಡ್ಮಿಷನ್ ಮಾಡಬೇಕೋ ಬೇಡವೊ ಎಂದು ಪಂಚಾಯತಿಯವರು ತೀರ್ಮಾನ ತೆಗೆದುಕೊಳ್ಳಲಿಲ್ಲ. ಇದು ಕೋರ್ಟಿನಲ್ಲಿ ನಿಕಾಲು ಆಗುವುದಕ್ಕೆ ಪಂಚಾಯತಿಯವರೇ ಕಾರಣ, ಮುನಿಸಿಪಾಲಿಟಿಯವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರದವರು ಕಬ್ಜ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಡಿ. ಕೆ. ನಾಯ್ಕರ್.—ಈ ಪ್ರಕರಣದಲ್ಲಿ ಎರಡು ಸಲ ದಾವೆಯಾಗಿ, ಒಂದು ಸಲ ಅಂದರೆ 21—3—1961ರಲ್ಲಿ ಇದು ನಿಕಾಲಾಗಿದೆ. ಇನ್ನೊಂದು ಸಲ ಅಂದರೆ, 13—2—1972ರಲ್ಲಿ ನಿಕಾಲಾಗಿದೆ. ಮಾನ್ಯ ಸದಸ್ಯರ ಹೇಳಿಕೆಯ ಪ್ರಕಾರ ಅಲ್ಲಿನ ಅಧ್ಯಕ್ಷರು ಇದರ ಬಗ್ಗೆ ಆಸ್ಥೆ ವಹಿಸಲಿಲ್ಲ ಎಂದು ಹೇಳಿದ್ದಾರೆ. ಅಧ್ಯಕ್ಷರು ಇದನ್ನು ತೆಗೆದುಕೊಳ್ಳತಕ್ಕ ಕಾಲದಲ್ಲಿ ಮುನಿಸಿಪಾಲಿಟಿಯವರು ಹಣವನ್ನು ಕೊಟ್ಟು ಬಿಟ್ಟಿದ್ದರು, ಆದ್ದರಿಂದ ಈಗ ಪೊಜಿಷನ್ ತೆಗೆದುಕೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

Corrections to Answers to Question No. 505

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ 505 ಪ್ರಶ್ನೆಯ ಉತ್ತರದಲ್ಲಿ (ಬಿ) ಭಾಗದ ಉತ್ತರ ತಪ್ಪಾಗಿದೆ ನಾನು ಉತ್ತರ ಕೊಡುವಾಗ್ಗೆ ಹೇಳಬೇಕಾಗಿತ್ತು. ಅದನ್ನು ಸ್ವಲ್ಪ ತಿದ್ದುಪಡಿ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ ಈಗ ಇರತಕ್ಕ ಉತ್ತರದ ಬದಲು 1964ರ ರ್ಯಾಂಡ್ ರೆವಿನ್ಯೂ ಆಕ್ಟ್ ಸೆಕ್ಷನ್ 94ರ ಪ್ರಕಾರ ಕ್ರಮ ಕೈಗೊಳ್ಳುತ್ತೇವೆ ಎಂದು ಇರಬೇಕು.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳ ಮುಗಿದೆವು.

QUESTIONS FOR ANSWERS ON THE DAY
(but not taken up)

ಬೆಂಗಳೂರು-ಕಡಪ ರಸ್ತೆಗೆ ಟಾರನ್ನು ಹಾಕುವುದು

೪೫೨. ಶ್ರೀ ಚೌಡಾರೆಡ್ಡಿ (ಚಿಂತಾಮಣಿ).—ರೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಬೆಂಗಳೂರು ಕಡಪ ರಸ್ತೆಯ ೭/೪೩ನೇ ಮೈಲಿಯಿಂದ ೮/೪೬ನೇ ಮೈಲಿಯವರೆಗೆ ಟಾರುರಸ್ತೆ ಅಂದರೆ ಚಿಪ್ ಕಾರ್ಪೆಟ್ ಯಾವ ವರ್ಷದಲ್ಲಿ ಮಾಡಲಾಗಿದ್ದಿತು ;

(ಆ) ಸದರಿ ರಸ್ತೆ ಈಗ ಯಾವ ಸ್ಥಿತಿಯಲ್ಲಿದೆ ?